**ಸಿ.ಸಿ.ನಂ.:**2014/2024

ಪಿ.ಡಬ್ಲ್ಯೂ:2

(ಇಂದು ದಿನಾಂಕಃ 15-07-**2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು -ಆರೋಪಿ ಪರ ಶ್ರೀ ಎಸ್.ಜೆ.ಎನ್. ವಕೀಲರಿಂದ**

ಆರೋಪಿತನು ಸಾಲವನ್ನು ಪಡೆದ ದಿನಾಂಕದಿಂದ ಈ ಪ್ರಕರಣವನ್ನು ದಾಲಿಸಿದ ದಿನಾಂಕದವರೆಗೆ 20,000/- ಯನ್ನು ಭರಣ ಮಾಡಿರುತ್ತಾನೆ. ನಿಪಿ.4 ದಿಃ 05-11-2022 ರಂದು ಜಾರಿಯಾಗಿರುತ್ತದೆ. ಆರೋಪಿತರು ಈ ಪ್ರಕರಣದಲ್ಲಿ ನೊಟೀಸು ಜಾರಿಯಾದಂ ನಂತರದಲ್ಲಿ ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ. ಆರೋಪಿತನಿಗೆ ನೋಟಿಸು ನೀಡಿದ ಕುರಿತಾಗಿ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ನೊಟಿಸನ್ನು ಆರೋಪಿತನು ನಿರಾಕರಿಸಿರುತ್ತಾನೆ. ಆರೋಪಿತನು ಪಿಗ್ಮಿ ಮುಖಾಂತರ ಯಾವುದೇ ಹಣವನ್ನು ತುಂಬಿರುವುದಿಲ್ಲ. ನಾವು ಆರೋಪಿತನಿಗೆ ಸಾಲವನ್ನು ನೀಡುವ ಸಂದರ್ಭದಲ್ಲಿ ಆತನಿಂದ ಚೆಕನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತನಿಂದ ನಿಪಿ.2ನ್ನು ಪಡೆದುಕೊಂಡು ಆತನಿಗೆ ತಿಳಿಯದೇ ನಿಪಿ.2ನ್ನು ದುರುಪಯೋಗಿಸಿಕೊಂಡು ಈ ಪ್ರಕರಣವನ್ನು ದಾಖಲುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಅಂಚೆ ಲಕೋಟೆಯ ಮೇಲೆ ಪೋಸ್ಟ ಮೆನ್ ನ್ನು ಹೊರತುಪಡಿಸಿ ನಿರಾಕರಿಸಿರುತ್ತಾರೆ ಎಂದು ಯಾರು ಬೇಕಾದರೂ ಬರೆಯಬಹುದು ಎಂದರೆ ಸರಿಯಲ್ಲ. ಸದರಿ ನೊಟಿಸನ್ನು ನಿರಾಕರಿಸಿದ್ದಾರೆ ಎಂಬುವುದನ್ನು ಪುರಾವೆ ಪಡಿಸಲು ಪೋಸ್ಟಮೆನ ಸಾಕ್ಷವನ್ನು ಮಾಡಬೇಕು ಎಂದರೆ ಸರಿ. ಆರೋಪಿತನು ಸಾಲ ಮರುಪಾವತಿಗಾಗಿ ಹಣವನ್ನು ಭರಣ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಾವು

ಆರೋಪಿತನ ಪಿಗ್ಮಿ ಖಾತೆಯ ಹಣವನ್ನು ಆತನ ಸಾಲದ ಖಾತೆಗೆ ಜಮಾ ಮಾಡದೇ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾದಂ. ಕುಮಟಾ